ಎಸ್ಸಿಸಿಹೆಚ್-20
ಸಿಸಿ 56144/2018 ಪಿಬ್ಲ್ಯೂ-1

**ದಿನಾಂಕ:29.03.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲು: ಶ್ರೀ.ಆರ್.ಕೆ ವಕೀಲರಿಂದ ಆರೋಪಿಯ ಪರವಾಗಿ.**

ಆರೋಪಿಯು ನಮ್ಮ ಕಂಪನಿಯಲ್ಲಿ ಮ್ಯಾನೇಜರ್ ಆಗಿ 2014 ರಿಂದ 2017 ರವರೆಗೆ ಕೆಲಸ ಮಾಡುತ್ತಿದ್ದರು. ಅಲ್ಲದೆ ಮುಲ್ಲಪಳ್ಳಿ ಎಂಟರ್-ಪ್ರೈಸಸ್ ಎನ್ನುವ ಕಂಪನಿಗೆ ನಿರ್ದೇಶಕರಾಗಿದ್ದರು ಎಂದರೆ ಸರಿ.

2. ನನ್ನ ಹಾಗೂ ಆರೋಪಿಯ ನಡುವೆ ಖರೀದಿಯ ಕರಾರು ಆಗಿರುತ್ತದೆ ಎಂದರೆ ಸದರಿ ಕರಾರನ್ನು ಸಹಿ ಮಾಡಿ ಅವರೇ ತೆಗೆದುಕೊಂಡು ಹೋಗಿದ್ದಾರೆ. ನನ್ನ ಹಾಗೂ ಆರೋಪಿಯ ನಡುವೆ ಬಾಡಿಗೆ ಕರಾರು ಆಗಿದ್ದು ಆದರೆ ಬಿಲ್ಡಿಂಗ್ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಬಿಲ್ಡಿಂಗ್ ಕೊಚಿನ್‌ನಲ್ಲಿ ಇದೆ. ಸದರಿ ಬಿಲ್ಡಿಂಗ್‌ನ ಮಾಲೀಕನ ಹೆಸರು ಲಾಲ್ ಅಂಟೋನಿ ಕತ್ತಿಕೆರೆ ಎಂದಿರುತ್ತದೆ. ಬಾಡಿಗೆ ಕರಾರು ಏಪ್ರಿಲ್ 2017 ರಲ್ಲಿ ಆಗಿರಬಹುದು ದಿನಾಂಕ ನೆನಪಿಲ್ಲ. ಸದರಿ ಕರಾರನ್ನು ಬೆಂಗಳೂರಿನಲ್ಲಿ ಮಾಡಿಸಲಾಗಿದೆ. ಬಾಡಿಗೆ ಕರಾರು ಆಗುವ ಸಮಯದಲ್ಲಿ ಚೆಕ್ಕುಗಳನ್ನು ಆರೋಪಿಯು ನೀಡಿದ ಕಾರಣ ನಾವು ಚೆಕ್ ಸಂಖ್ಯೆಗಳನ್ನು ಬಾಡಿಗೆ ಕರಾರಿನಲ್ಲಿ ನಮೂದಿಸಿಲ್ಲ. ಸದರಿ ಕರಾರನ್ನು ಅವರೇ ಸಹಿ ಮಾಡಿ ತೆಗೆದುಕೊಂಡು ಹೋಗಿರುವ ಕಾರಣ ದಾಖಲೆ ಹಾಜರುಪಡಿಸಿಲ್ಲ. ಸದರಿ ಸ್ವತ್ತನ್ನು ಈಗ ಮುಚ್ಚಿರುತ್ತಾರೆ. ಬಾಡಿಗೆ ನೀಡಿಲ್ಲ ಎಂದು ನೋಟೀಸ್ ನೀಡಿಲ್ಲ. ಆದರೆ ಮೇಲ್‌ನಲ್ಲಿ ದಾಖಲೆಗಳು ಇದೆ. ಬಾಡಿಗೆ ನೀಡದ ಕಾರಣ ನಾವು ರಶೀದಿ ನೀಡಿಲ್ಲ. ಆರೋಪಿಯು ನನ್ನ ಬಳಿ ವೈಯಕ್ತಿಕವಾಗಿ ಯಾವುದೇ ಹಣ ಪಡೆದಿಲ್ಲ.

3. ಲಾಲ್ ಅಂಟೋನಿ ಕತ್ತಿಕೆರೆರವರಿಗೆ ನಮ್ಮ ಖಾತೆಯಿಂದ ಏಪ್ರಿಲ್ 2017 ರಿಂದ ಆರೋಪಿಯ ಪರವಾಗಿ ನಾನೇ ಬಾಡಿಗೆ ನೀಡುತ್ತಿದ್ದೇವೆ. ಅದೇ ಸಂದರ್ಭದಲ್ಲಿ ಮುಲ್ಲಪಳ್ಳಿ ಎಂಟರ್-ಪ್ರೈಸಸ್ ಕೂಡ ತೆರೆದು, ಅದೇ ಬಿಲ್ಡಿಂಗ್‌ನಲ್ಲಿ ಕಂಪನಿ ನಡೆಸುತ್ತಿದ್ದರು. ಅಂದರೆ ನಮಗೂ ಮತ್ತು ಲಾಲ್ ಅಂಟೋನಿ ಕತ್ತಿಕೆರೆಯವರ ನಡುವೆ ಕರಾರು ಆಗಿದೆ ಎಂದರೆ ಸರಿ.

4. ಈ ಪ್ರಕರಣದಲ್ಲಿ ಇರುವ ಎರಡು ಚೆಕ್ಕುಗಳನ್ನು ಸ್ವತ್ತು ಖರೀದಿಗಾಗಿ ಭದ್ರತೆಗಾಗಿ ನಮಗೆ ನೀಡಲಾಗಿರುತ್ತದೆ ಎಂದರ ಸರಿಯಲ್ಲ. ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು ಹಾಗೂ
24 ನೇ ಎಸಿಎಂಎಂ, ಬೆಂಗಳೂರು.